0P

**ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ ರಾಯಚೂರು**

ಸಂಖ್ಯೆ: ಲೆಕ್ಕ 4/ರೆಡ್‌ಕ್ರಾಸ್/2020-21 1228 ದಿನಾಂಕ:18-11-2020

**ನೆನಪೋಲೆ-1**

**ವಿಷಯ** : ರಾಜ್ಯದ ಎಲ್ಲಾ ಪ್ರೌಢ ಶಾಲೆಗಳನ್ನು ಕಿರಿಯ ರೆಡ್ ಕ್ರಾಸ್ ಘಟಕಕ್ಕೆ ನೊಂದಾಯಿಸುವ ಬಗ್ಗೆ.

**ಉಲ್ಲೇಖ** :1) ಮಾನ್ಯ ಪ್ರಧಾನ ಕಾರ್ಯದರ್ಶಿ (ಪ್ರಭಾರ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ಬೆಂಗಳೂರು ಇವರ ಪತ್ರ ದಿನಾಂಕ: 03-11-2020.

2) ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 04-11-2020.

3) ಮಾನ್ಯ ಪ್ರಧಾನ ಕಾರ್ಯದರ್ಶಿ (ಪ್ರಭಾರ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ಬೆಂಗಳೂರು ಇವರ ದೂರವಾಣಿ ಸಂದೇಶ ದಿನಾಂಕ: 18-11-2020.

>>>()<<<

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನ್ವಯ ದಿನಾಂಕ: 15ನೇ ಅಕ್ಟೋಬರ್-2020ರಂದು ಆನಲೈನ್‌ನಲ್ಲಿ ವೆಬಿನಾರ್ ಕಾರ್ಯಕ್ರಮವನ್ನು ಹಮ್ಮಿಕೊಂಡು, ಕಿರಿಯ ರೆಡ್‌ಕ್ರಾಸ್‌ನ ಬಗ್ಗೆ ಸವಿಸ್ತಾರವಾಗಿ ಅಗತ್ಯ ಮಾಹಿತಿ ನೀಡಲಾಗಿತ್ತು. ಆದರೆ ಸುಮಾರು ಶಾಲೆಗಳು ನೊಂದಾವಣೆಯಾಗಿರುವುದಿಲ್ಲ. (ಪ್ರಗತಿಯ ಪಟ್ಟಿ ಲಗತ್ತಿಸಿದೆ) ಕನಿಷ್ಟ 70 ರಿಂದ 80 ಶಾಲೆಗಳನ್ನು ನೊಂದಾವಣೆ ಮಾಡಬೇಕಾಗಿದೆ. ಆದುದರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ಮಾಡಿ ತ್ವರಿತವಾಗಿ ಶಾಲೆಗಳು ನೊಂದಾವಣಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿ ಈ ಪತ್ರದೊಂದಿಗೆ ಸರ್ಕಾರದ ಆದೇಶದ ಪ್ರತಿಯನ್ನು ಮತ್ತು ಶಾಲೆಗಳು ನೊಂದಾವಣೆಯಾಗಿರುವ ಅಂಕಿ ಅಂಶಗಳ ಪ್ರತಿಯನ್ನು ಹಾಗೂ ಅರ್ಜಿ ನಮೂನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿತ್ತು. ಆದರೆ ತಮ್ಮಿಂದ ಸದರಿ ಮಾಹಿತಿ ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಉಲ್ಲೇಖ 3ರನ್ವಯ ಸದರಿ ಮಾಹಿತಿಯನ್ನು ತುರ್ತಾಗಿ ಸಲ್ಲಿಸುವಂತೆ ದೂರವಾಣಿ ಮೂಲಕ ಸೂಚಿಸಿರುತ್ತಾರೆ.

ಪ್ರಯುಕ್ತ ಶಾಲೆಗಳು ನೊಂದಾವಣಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವರದಿ/ಮಾಹಿತಿಯನ್ನು ತ್ವರಿತವಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು

**ಗೆ,**

ಕ್ಷೇತ್ರ ಶಿಕ್ಷಣಾಧಿಕಾರಿಗಳು,
ದೇವದುರ್ಗ, ಲಿಂಗಸುಗೂರು, ಮಾನವಿ,
ರಾಯಚೂರು ಮತ್ತು ಸಿಂಧನೂರು

**ಪ್ರತಿಯನ್ನು:**

1) ಮಾನ್ಯ ಪ್ರಧಾನ ಕಾರ್ಯದರ್ಶಿ (ಪ್ರಭಾರ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ಬೆಂಗಳೂರು ಇವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.

INDIAN RED CROSS SOCIETY ★ KARNATAKA STATE BRANCH ★
Date 990
23/11/2020